# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

## ಎಸ್ಸಿ ನಂ. 36/2014

**ದೋ.ಸಾ. : 28 ಫ್ರಾ.ಸಾ. : 5**

| | | |
|---|---|---|
| ಸಾಕ್ಷಿಯ ಹೆಸರು | : | ಶೋಬಾ ರಾಜು ನಾಯರ್ |
| ಗಂಡನ ಹೆಸರು | : | ರಾಜು ನಾಯರ್ |
| ವಯಸ್ಸು | : | 47 ವರ್ಷ |
| ಕೆಲಸ | : | ಆಶಾ ಕಾರ್ಯಕರ್ತೆ . |
| ವಾಸ | : | ರಾಜೀವನಗರ, ಕದ್ರಾ, ಕಾರವಾರ. |

**ದಿನಾಂಕಃ 24-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು 2010 ನೇ ಇಸವಿಯಿಂದ ಆಶಾ ಕಾರ್ಯಕರ್ತೆಯಾಗಿ ಕದ್ರಾದ ರಾಜೀವನಗರದಲ್ಲಿ ಕೆಲಸ ಮಾಡುತ್ತಿರುತ್ತೇನೆ ಹಾಗೂ ರಾಜೀವನಗರದಲ್ಲಿ ವಾಸವಾಗಿರುತ್ತೇನೆ. ಮೃತ ವೇಲು ಹಾಗೂ ಅವರ ಮಕ್ಕಳಾದ ಸತ್ಯ ನಾರಾಯಣ ಮೂರ್ತಿ ಮತ್ತು ಅಶ್ವಿನಿಯವರು ನನಗೆ ಗೊತ್ತು, ಮೃತ ವೇಲುವಿನ ಹೆಂಡತಿಯ ಹೆಸರು ಜಾನಕಿ, ಅವರು ಸಹ ರಾಜೀವನಗರದಲ್ಲಿ ವಾಸವಾಗಿದ್ದರು. ಚಾಸಾ-27 ಕವಿತಾ ನನಗೆ ಗೊತ್ತು, ಅವರು ಮೃತ ವೇಲುವಿನ ಪಕ್ಕದ ಮನೆಯಲ್ಲಿ ವಾಸವಾಗಿರುತ್ತಾರೆ. ದಿನಾಂಕ 14.02.2014 ರಂದು ರಾತ್ರಿ 10.50 ಗಂಟೆಗೆ ನಾನು ಮನೆಯಲ್ಲಿದ್ದಾಗ ಚಾಸಾ-27 ರವರು ನನಗೆ ಕರೆ ಮಾಡಿ "ನಮ್ಮ ಪಕ್ಕದ ಮನೆಯ ಜಾನಕಿ ನಮ್ಮ ಮನೆಯ ಹತ್ತಿರ ಬಂದು ಬಾಗಿಲು ಬಡಿದು ಕರೆಯುತ್ತಿದ್ದಳು, ನಾನು ಬಾಗಿಲು ತೆಗೆದು ನೋಡಿದಾಗ ಅವಳ ಎಡಗೈ ಕತ್ತಿರಿಸಿದ್ದು ಹಾಗೂ ಅವಳ ತಲೆಗೆ ಗಾಯವಾಗಿ ರಕ್ತ ಬರುತ್ತಿತ್ತು, ಆಗ ನಾನು ಹೆದರಿಕೊಂಡು ಬಾಗಿಲು ಮುಚ್ಚಿರುತ್ತೇನೆ" ಎಂದು ಹೇಳಿದಳು. ಆ ಕೂಡಲೇ ನಾನು ನಮ್ಮ ಅಕ್ಕಪಕ್ಕದ ಮನೆಯವರಿಗೆ ವಿಷಯ ತಿಳಿಸಿ, ನಾನು ಹಾಗೂ ನಮ್ಮ ಅಕ್ಕಪಕ್ಕದ ಮನೆಯವರು ಮೃತ ಮೇಲುವಿನ ಮನೆಯ ಹತ್ತಿರ ಹೋಗಿ ನೋಡಿದಾಗ, ಮನೆಯ ಹೊರಗೆ ಸ್ವಲ್ಪ ಜನ ನಿಂತಿದ್ದರು, ಮನೆಯ ಒಳಗೆ ದೇವರ ದೀಪ ಉರಿಯುತ್ತಿದ್ದು, ಆ ದೀಪವನ್ನು ಮಗುವಿನ ತಲೆಯ ಹತ್ತಿರ ಇಡಲಾಗಿತ್ತು, ನಾವು ಮನೆಯ ಬಾಗಿಲಲ್ಲಿ ನಿಂತು ಮೊಬೈಲ್ ಟಾರ್ಚನಿಂದ ಒಳಗೆ ನೋಡಿದಾಗ,

ಮನೆಯಲ್ಲಿ ವಿದ್ಯುತ್ ದೀಪ ಇರಲಿಲ್ಲ, ಮಗುವಿನ ತಲೆಯ ಹತ್ತಿರ ದೇವರ ದೀಪ ಉರಿಯುತ್ತಿತ್ತು, ಜಾನಕಿಯ ಎಡಗೈ ಕತ್ತರಿಸಿ, ತುಂಡಾಗಿ ಕೆಳಗೆ ಬಿದ್ದಿತ್ತು ಹಾಗೂ ರಕ್ತ ಬರುತ್ತಿತ್ತು ಮತ್ತು ತಲೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತು, ಜಾನಕಿ ಮಗಳಾದ ಅಶ್ವಿನಿ ಮನೆಯ ಹಾಲ್ ನಲ್ಲಿ ಬಿದ್ದಿದ್ದಳು ಹಾಗೂ ಅವಳ ಕುತ್ತಿಗೆ ಹಾಗೂ ಕೈಗಳ ಮೇಲೆ ಕತ್ತರಿಸಿದ ಗಾಯವಾಗಿ ರಕ್ತ ಸ್ರಾವವಾಗುತ್ತಿತ್ತು ಹಾಗೂ ಅವಳು ಮೃತಳಾಗಿದ್ದಳು. ಆ ಸಮಯದಲ್ಲಿ ಮನೆಯಲ್ಲಿ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿ ಕಾಣಿಸಲಿಲ್ಲ. ಆ ನಂತರ ಸ್ಥಳೀಯ ಜನರು ಪೋಲಿಸರಿಗೆ ಸುದ್ದಿ ತಿಳಿಸಿದ್ದು, ಪೊಲೀಸರು ಸ್ಥಳಕ್ಕೆ ಬಂದು ಗಾಯಗೊಂಡಿದ್ದ ಜಾನಕಿಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಹಾಗೂ ನಮ್ಮನೆಲ್ಲಾ ಅಲ್ಲಿಂದ ಕಳುಹಿಸಿದರು.

2. ಮಾರನೇ ದಿನ ಬೆಳಿಗ್ಗೆ ಮೃತ ವೇಲು ಹಾಗೂ ಆತನ ಮಗನ ಶವ ಅವರ ಮನೆಯ ಹತ್ತಿರದ ಅರಣ್ಯಕ್ಕೆ ಹೋಗುವ ದಾರಿಯಲ್ಲಿ ಬಿದ್ದಿದ್ದವು ಎಂದು ವಿಷಯ ಗೊತ್ತಾಯಿತು. ಆ ನಂತರ ನಾನು ಬೆಳಿಗ್ಗೆ 8.00 ರಿಂದ 8.30 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ ಮೃತ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿಯ ಶವ ಬಿದ್ದಿದ್ದು, ಸತ್ಯ ನಾರಾಯಣ ಮೂರ್ತಿಯ ಕುತ್ತಿಗೆಗೆ ಕಡಿದ ಗಾಯವಾಗಿತ್ತು ಹಾಗೂ ಆ ಶವದ 10-15 ಅಡಿ ದೂರದಲ್ಲಿ ವೇಲುವಿನ ಶವ ಬಿದ್ದಿದ್ದು, ವೇಲುವಿನ ಕುತ್ತಿಗೆ ಹಾಗೂ ಎಡಗೈಗೆ ಕಡಿದ ಗಾಯಗಳು ಆಗಿ ರಕ್ತ ಸ್ರಾವವಾಗಿತ್ತು, ಪಕ್ಕದಲ್ಲಿಯೇ ವೇಲುವಿನ ಉರುಗೋಲು ಬಿದ್ದಿತ್ತು. ನಾನು ಶವಗಳನ್ನು ನೋಡಿದಾಗ ಅವರ ಕೊಲೆಯಾಗಿದೆ ಎಂದು ಕಂಡು ಬಂತು ಹಾಗೂ ಜಾನಕಿಯ ಮೇಲೆ ಕೊಲೆ ಪ್ರಯತ್ನ ಮಾಡಲಾಗಿದೆ ಎಂದು ಕಂಡು ಬಂತು. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯವಿಚಾರಣೆಗಾಗಿ ಕಾಲಾವಕಾಶವನ್ನು ಕೇಳಿದ್ದು, ಕಾಲಾವಕಾಶವನ್ನು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ